## ಅನುಮತಿ ಬಯಸಿ ರೈಲು ಪ್ರಸ್ತಾವ ಸಾಗಿದ ದಾರಿ

ಅರಣ್ಯ ಮತ್ತು ಪರಿಸರದ ಸುರಕ್ಷತೆಗೆ ಧಕ್ಕೆ ತರಬಲ್ಲ ಯಾವುದೇ ಬೃಹತ್ ಯೋಜನೆ ಹಮ್ಮಿಕೊಳ್ಳುವಾಗ ಕೇಂದ್ರ ಅರಣ್ಯ ಹಾಗೂ ಮಂತ್ರಾಲಯದ ಒಪ್ಪಿಗೆ ಪಡೆಯಲೇಬೇಕು. 'ಅರಣ್ಯ ಸಂರಕ್ಷಣಾ ಕಾಯ್ದೆ' (FCA, 1980), 'ವನ್ಯಜೀವಿ ಸಂರಕ್ಷಣಾ ಕಾಯ್ದೆ' (WPA, 1972) ಹಾಗೂ 'ಪರಿಸರ ಸಂರಕ್ಷಣಾ ಕಾಯ್ದೆ' (ECA, 1980) ಅನ್ವಯ ರಚಿತವಾಗಿರುವ ಸಾಂವಿಧಾನಿಕ ಸಂಸ್ಥೆಗಳು ನಡೆಸುವ ವಿಸ್ತೃತ ವಿಧಿ–ವಿಧಾನಗಳ ಮೂಲಕ ಯೋಜನೆಗಳ ಸಾಧಕ–ಬಾಧಕಗಳನ್ನು ಪರಾಮರ್ಶಿಸಿ ಒಪ್ಪಿಗೆ ನೀಡುವ ಅಥವಾ ತಿರಸ್ಕರಿಸುವ ನಿರ್ಧಾರ ಕೈಗೊಳ್ಳಲಾಗುತ್ತದೆ. ಕಳೆದ ಸುಮಾರು ಎರಡು ದಶಕಗಳಿಂದ ಹುಬ್ಬಳ್ಳಿ–ಅಂಕೋಲಾ ರೈಲು ಯೋಜನೆ ಪ್ರಸ್ತಾವ ಸಾಗಿಬಂದ ಪ್ರಮುಖ ಮೈಲಿಗಲ್ಲುಗಳು ಇಲ್ಲಿವೆ.

- 1996: ದೀರ್ಘಕಾಲದಿಂದ ಉದ್ಯಮ ವಲಯದಿಂದ ಬೇಡಿಕೆಯಿದ್ದ 167 ಕಿ.ಮೀ. ದೂರದ ಹುಬ್ಬಳ್ಳಿ–ಅಂಕೋಲಾ ರೈಲು ಯೋಜನೆಗೆ ಕೇಂದ್ರ ರೈಲು ಮಂಡಳಿ 1996ರಲ್ಲಿ ಮಂಜೂರಾತಿ ನೀಡಿತು. ಇದಕ್ಕೆ ಆಗಲೇ ತೀವ್ರ ವಿರೋಧವಿತ್ತು.
- 1999: ಸುಮಾರು 727 ಹೆಕ್ಟೇರ್ ದಟ್ಟ ಅರಣ್ಯ, 210 ಹೆಕ್ಟೇರ್ ಒಣಭೂಮಿ ಹಾಗೂ 179 ಹೆಕ್ಟೇರ್ ಜೌಗುಭೂಮಿ ಸೇರಿದಂತೆ, ಒಟ್ಟೂ 1,134 ಹೆಕ್ಟೇರ್ ಭೂಮಿಯನ್ನು ಪಶ್ಚಿಮಘಟ್ಟಶ್ರೇಣಿಯ ಈ ಸೂಕ್ಷ್ಮ ಪ್ರದೇಶದಲ್ಲಿ ಬಳಸುವುದು ಪರಿಸರಕ್ಕೆ ಮಾರಕವಾಗುತ್ತದೆ ಎಂದು, ಈ ಯೋಜನೆಯ ವಿರುದ್ಧ ಪರಿಸರ ಕಾಳಜಿಯುಳ್ಳ ಕೆಲವು ಸಂಸ್ಥೆಗಳು 1999ರಲ್ಲಿ ಸುಪ್ರೀಕೋರ್ಟ್ ಮೆಟ್ಟಿಲೇರಿದವು.
- 2000: ಈ ಯೋಜನೆಯ ಶಂಕುಸ್ಥಾಪನೆಯನ್ನು ಪರಿಸರ ಹೋರಾಟಗಾರರ ವಿರೋಧದ ನಡುವೆಯೂ ಅಂದಿನ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪಾಯಿ ಮೇ 2000ರಲ್ಲಿ ನೆರವೇರಿಸಿದರು.
- 2001: ಈ ರೈಲು ಮಾರ್ಗದ ಹುಬ್ಬಳ್ಳಿ–ಕಲಘಟಗಿ ವಿಭಾಗದ ಕೆಲಸವು 2001ರಲ್ಲಿ ಆರಂಭವಾಯಿತು.(ಅರಣ್ಯವಿರದ ಈ ಪ್ರದೇಶದಲ್ಲಿ ಅರಣ್ಯ ಮಂತ್ರಾಲಯದ ಒಪ್ಪಿಗೆ ಬೇಕಿರಲಿಲ್ಲ). ಸುಮಾರು 45 ಕಿ.ಮೀ. ದೂರದ ಈ ಕಾಮಗಾರಿಯು ಇದೀಗ ಬಹುತೇಕ ಮುಗಿದಿದೆ!
- 2004: ಅಭಿವೃದ್ಧಿ ಯೋಜನೆಗಳಿಗೆ ಅರಣ್ಯವನ್ನು ವರ್ಗಾಯಿಸುವ ತೀರ್ಮಾನವನ್ನು ಕೈಗೊಳ್ಳುವ ಕಾನೂನುಬದ್ಧ ಅಧಿಕಾರವುಳ್ಳ ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯದಡಿಯ ತಜ್ಞರ ಸಮಿತಿಯಾದ 'ಅರಣ್ಯ ಸಲಹಾ ಸಮಿತಿ' (Forest Advisory Committee – FAC) ಕೂಡ 'ಈ ಯೋಜನೆ ಸಾಧುವಲ್ಲ ಹಾಗೂ ಅರಣ್ಯವನ್ನು ವರ್ಗಾಯಿಸಲಾಗದು' ಎಂದು ತೀರ್ಮಾನಿಸಿತು.
- 2005: ಅರಣ್ಯ ಸಂರಕ್ಷಣೆ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಕ್ಕೆ ತಜ್ಞ ಸಲಹೆ ನೀಡಲೆಂದೇ ರಚಿತವಾಗಿರುವ ತಜ್ಞರುಗಳುಳ್ಳ 'ಕೇಂದ್ರೀಯ ಉನ್ನತಾಧಿಕಾರ ಸಮಿತಿ' (Central Empowered Committee – CEC) ಈ ಕುರಿತ ಎಲ್ಲ ಆಯಾಮಗಳನ್ನು ವಿವರವಾಗಿ ಅಭ್ಯಸಿಸಿ, ಈ ಯೋಜನೆಯನ್ನು ಸ್ಥಗಿತಗೊಳಿಸುವುದೇ ಸೂಕ್ತ ಎಂದು ಸ್ಪಷ್ಟವಾಗಿ ಸುಪ್ರೀಂಕೋರ್ಟಿಗೆ ತಿಳಿಸಿತು. ಅರಣ್ಯ ಕಾಯ್ದೆಯ (FCA, 1980) 2ನೇ ಸೆಕ್ಷನ್ನಿನ ಆಶಯದ ಹಿನ್ನೆಲೆಯಲ್ಲಿ ಈ ಯೋಜನೆಗೆ ಈ ಸಮೃದ್ಧ ಅರಣ್ಯವನ್ನು ವರ್ಗಾಯಿಸುವುದು ಸರಿಯಲ್ಲ ಎಂದುಹೇಳಿತು.
- 2006: ಈ ಯೋಜನೆಯನ್ನು ವಿರೋಧಿಸಿ 'ಕೇಂದ್ರೀಯ ಉನ್ನತಾಧಿಕಾರ ಸಮಿತಿ'ಗೆ (Central Empowered Committee CEC), ಪರಿಸರ ಸಂರಕ್ಷಣೆ ಕಾರ್ಯದಲ್ಲಿ ತೊಡಗಿಸಿಕೊಂಡ ಕರ್ನಾಟಕದ ಎರಡು ಪರಿಸರ ಸಂಘಟನೆಗಳು (ಪರಿಸರ ಸಂರಕ್ಷಣಾ ಕೇಂದ್ರ ಹಾಗೂ ವೈಲ್ಡರ್ನೆಸ್ ಕ್ಲಬ್) 2006ರಲ್ಲಿ ಮನವಿ ಮಾಡಿದವು. ಈ ಹಿನ್ನೆಲೆಯಲ್ಲಿ ದೀರ್ಘ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್, ಜಾರಿಯಲ್ಲಿದ್ದ ಕಾಮಗಾರಿಗೆ ತಡೆಯಾಜ್ಞೆ ನೀಡಿತು.
- 2010–15: ಈ ಯೋಜನೆಯು ಕಾಳಿ ಹುಲಿ ರಕ್ಷಿತಾರಣ್ಯದ ಅಂಚಿನ ಪರಿಸರಸೂಕ್ಷ್ಮ ಪ್ರದೇಶದಲ್ಲಿ ಸಾಗುವುದರಿಂದ, ಇದಕ್ಕೆ ಅನುಮತಿ ನೀಡುವುದು ವನ್ಯಜೀವಿ ಕಾಯ್ದೆಯ ಆಶಯದ ಉಲ್ಲಂಘನೆಯಾಗುತ್ತದೆಂದು, ವನ್ಯಜೀವಿ ಕಾಯ್ದೆ (WPA, 1972) ಅನ್ವಯ ಕಾರ್ಯ ನಿರ್ವಹಿಸುವ 'ರಾಷ್ಟ್ರೀಯ ವನ್ಯಜೀವಿ ಮಂಡಳಿ' (NWLB) ಹಾಗೂ 'ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ' (NTCA) ಗಳು ಹಲವು ಸಲ ಅಭಿಪ್ರಾಯಪಟ್ಟಿದೆ.
- 200818: ವನ್ಯಜೀವಿ ಕಾಯ್ದೆ (WPA, 1972) ಅನ್ವಯ ಕಾರ್ಯ ನಿರ್ವಹಿಸುವ ಮುಖ್ಯಮಂತ್ರಿಗಳ ಅಧ್ಯಕ್ಷತೆಯ ಕರ್ನಾಟಕ 'ರಾಜ್ಯ

ವನ್ಯಜೀವಿಗಳು ಹಾಗೂ ಜೀವವೈವಿಧ್ಯವಿರುವ ಪ್ರದೇಶವಿದು. ಇವನ್ನೆಲ್ಲ ಮೆಟ್ಟಿ ರೈಲುಮಾರ್ಗ ಸಾಗಿದರೆ, ಇಲ್ಲಿನ ಪರಿಸರ ಹಾಗೂ ರೈತರ ಬದುಕು ಏನಾದೀತು?

ಈ ಭೂಪ್ರದೇಶವಾದರೋ, ಮೂಲತಃ ಭೂಕುಸಿತವಾಗುವ ಸಡಿಲ ಮಣ್ಣಿನದೆಂದು ಭೂಗರ್ಭಶಾಸ್ತ್ರಜ್ಞರು ಹೇಳುತ್ತಾರೆ. ಕಾಡುನಾಶವಾದರೆ ಮೇಲ್ಮಣ್ಣು ತೊಳೆದುಹೋಗಿ, ಭೂಮಿ ಮತ್ತಷ್ಟು ಸಡಿಲವಾಗುತ್ತದೆ. ನೆಲದಡಿಯ ಬೇರುಗಳು ಕೊಳೆತು ಉಂಟಾಗುವ ಕೊಳವೆರೂಪದ ರಂಧ್ರಗಳಲ್ಲಿ ಮಳೆನೀರು ನುಗ್ಗಿ, ಭೂಕುಸಿತ ಹೆಚ್ಚಾಗುತ್ತದೆ. ಈ ಕಣಿವೆಯ ವಜ್ರಳ್ಳಿ, ರಾಮನಗುಳಿ ಹಳ್ಳಿಗಳಲ್ಲಿ ಕಳೆದ ಮಳೆಗಾಲದಲ್ಲಷ್ಟೇ ಆದ ನೆರೆ ಹಾಗೂ ಭೂಕುಸಿತದ ಭೀಕರ ದೃಶ್ಯಗಳನ್ನು ಜನರಿನ್ನೂ ಮರೆತಿಲ್ಲ. ಪಕ್ಕದ ಕಾಳಿನದಿ ಕಣಿವೆಯ ಕೊಡಸಳ್ಳಿ ಜಲಾಶಯದ ಜಲಾನಯನ ಪ್ರದೇಶದಲ್ಲಂತೂ ಆಗಾಗ ಭೂಕುಸಿತವಾಗುತ್ತಲೇ

